**PW-1:** ನರಸಿಂಹರೆಡ್ಡಿ

ದಿನಾಂಕಃ **16.07.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರವಾಗಿ ಶ್ರೀ ಎಸ್.ವಿ.ಆರ್. ವಕೀಲರಿಂದಃ**

ನಾನು ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ಸಲ್ಲಿಸಿದ್ದು ಅದರಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು ಅವುಗಳನ್ನು ನಾನೇ ಹೇಳಿ ಬರೆಯಿಸಿರುತ್ತೇನೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ಈ ದಿನ ನಾನು ಹಾಜರುಪಡಿಸಿರುವ ದಾಖಲೆಗಳನ್ನು ನಿಶಾನೆಯಾಗಿ ಪರಿಗಣಿಸಲಾಗಿ ಪ್ರಾರ್ಥಿಸುತ್ತೇನೆ.

ಸಾಕ್ಷಿಯು ದಿನಾಂಕಃ 01.12.2017 ರ ನೋಂದಾಯಿತ ಕ್ರಯದ ಕರಾರುಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ.1 ಎಂದು, ಸಾಕ್ಷಿಯ ಸಹಿಗಳನ್ನು ನಿಪಿ.1(ಎ) ಯಿಂದ (ಸಿ), ಪ್ರತಿವಾದಿಯ ಸಹಿಗಳನ್ನು ನಿಪಿ.1(ಡಿ) ಯಿಂದ (ಎಫ್) ಎಂದು ಗುರುತಿಸಲಾಯಿತು. ಮುಟೇಷನ್ ವಹಿಯನ್ನು ನಿಪಿ.2 ಎಂದು, ಪಹಣಿ ಪತ್ರಿಕೆಗಳನ್ನು ನಿಪಿ.3 ರಿಂದ 7 ಎಂದು, ಬ್ಯಾಂಕ್ ಸ್ಟೇಟ್ ಮೆಂಟ್ ನ ಕಂಪ್ಯೂಟರ್ ಪ್ರತಿಯನ್ನು, ನಿಪಿ.8 ಎಂದು, ಇ.ಸಿ.ಯನ್ನು ನಿಪಿ.9 ರಿಂದ 11 ಎಂದು, ತಿಳುವಳಿಕೆ ಪತ್ರವನ್ನು ನಿಪಿ.2 ಎಂದು, ಅಂಚೆ ರಶೀದಿಯನ್ನು ನಿಪಿ.13 ಎಂದು, ವಾಪಸ್ಸಾದ ಅಂಚೆ ಲಕೋಟೆಯನ್ನು ನಿಪಿ.14 ಎಂದು, ಲಕೋಟೆಯಲ್ಲಿರುವ ತಿಳುವಳಿಕೆ ಪತ್ರವನ್ನು ನಿಪಿ.14(ಎ) ಎಂದು ಗುರುತಿಸಲಾಯಿತು.

(ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರಿದ ಮುಖ್ಯವಿಚಾರಣೆಗೆ ಮುಂದೂಡಲಾಯಿತು)

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.